<u>2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>
<u>ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).</u>
<u>ಎಸ್.ಸಿ. ನಂ. 5017/2022</u>

ಪ್ರಾಸಾ ಃ 1

ಚಾಸಾ ಃ 1

ಸಾಕ್ಷಿಯ ಹೆಸರು ಃ ಬೇಬಿ

ಗಂಡನ ಹೆಸರುಃ ಭುಬ್ಬ

ವಯಸ್ಸು ಃ 31 ವರ್ಷ

ವೃತ್ತಿ ಃ ಕೂಲಿ ಕೆಲಸ

ವಿಳಾಸ ಃ ಬಿ ಶೆಟ್ಟಿಗೇರಿ ಗ್ರಾಮ

ದಿಃ 25.07.2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ</u>

1. ಮೃತ ಚಿಮ್ಮಿ ನನ್ನ ತಾಯಿ. ಚಾಸಾ 3 ನನ್ನ ಭಾವ. ಚಾಸಾ 4 ನನ್ನ ಗಂಡ. ಚಾಸಾ 5 ಚಾಸಾ 3 ರವರ ಮಗ. ನನಗೆ ನ್ಯಾಯಾಲಯ ಮುಂದಿರುವ ಆರೋಪಿತರ ಪರಿಚಯ ಇಲ್ಲ. ನಾನು ನನ್ನ ಗಂಡನೊಂದಿಗೆ ಶೆಟ್ಟಿಗೇರಿಯ ಲೈನ್ ಮನೆಯಲ್ಲಿ ವಾಸಮಾಡಿಕೊಂಡಿದ್ದೆ. ನನ್ನ ತಾಯಿ ಬಾಳೆಲೆ ಗ್ರಾಮದಲ್ಲಿ ಚಾಸಾ 3 ರವರೊಂದಿಗೆ ವಾಸವಾಗಿದ್ದರು. ಈಗ್ಗೆ ಒಂದು ವರ್ಷದ ಹಿಂದೆ ಚಾಸಾ 5 ರವರು ನನಗೆ ಫೋನ್ ಮಾಡಿ ನಿನ್ನ ತಾಯಿಗೆ ಯಾರೋ ಕಡಿದಿದ್ದಾರೆ, ಅವರು ಲೈನ್ ಮನೆಯಲ್ಲಿ ಮಲಗಿದ್ದಾರೆ ಎಂದು ಹೇಳಿದರು. ಆಗ ನಾನು ಹಾಗೂ ನನ್ನ ಗಂಡ ಚಾಸಾ 4 ಹೋಗಿ ನೋಡಿದಾಗ ನನ್ನ ತಾಯಿಯ ಕತ್ತು ಕುಯ್ದಿದ್ದು ಕಾಣಿಸಿತು, ಆಕೆ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ,

ಉಸಿರಾಡುತ್ತಿದ್ದರು, ಕೈಯಲ್ಲಿ ಸನ್ನೆ ಮಾಡುತ್ತಿದ್ದರು. ನಾನು ನನ್ನ ತಾಯಿಯನ್ನು ವಿಚಾರಿಸಿದಾಗ ಸನ್ನೆಯಲ್ಲಿ ಇಬ್ಬರು ವ್ಯಕ್ತಿಗಳು ರಾತ್ರಿ ಸಮಯದಲ್ಲಿ ನನಗೆ ಕಡಿದಿದ್ದಾರೆ ಎಂದು ತಿಳಿಸಿದರು. ನನ್ನ ತಾಯಿ ಆ ವ್ಯಕ್ತಿಗಳ ಹೆಸರುಗಳನ್ನು ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ನನ್ನ ತಾಯಿಯನ್ನು ವಿರಾಜಪೇಟೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಅಲ್ಲಿ ವೈದ್ಯರು ಆಗುವುದಿಲ್ಲ ಎಂದು ಹೇಳಿದ್ದು ನಾವು ಆಕೆಯನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ನನ್ನ ತಾಯಿ 3 ದಿನ ಇದ್ದು ನಂತರ ಮರಣ ಹೊಂದಿರುತ್ತಾರೆ. ಪೊಲೀಸರು ವಿರಾಜಪೇಟೆ ಆಸ್ಪತ್ರೆಗೆ ಬಂದಿದ್ದರು. ಅಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು ಪೊಲೀಸರ ಬಳಿ ನನ್ನ ತಾಯಿಗೆ ಯಾರೋ ಕಡಿದಿದ್ದಾರೆ ಎಂದು ಹೇಳಿದ್ದೆ. ಆಗ ಅವರು ಬರವಣಿಗೆ ಮಾಡಿ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿದ್ದರು. ಸದರಿ ಹೇಳಿಕೆ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ನಾನು ಪೊಲೀಸರ ಸಮಕ್ಷಮ ಪಂಜರಿಯರವರ ಮಂಜು ನನ್ನ ತಾಯಿಗೆ ಕತ್ತಿಯಿಂದ ಕಡಿದು ಕೊಲೆ ಮಾಡಲು ಪ್ರಯತ್ನಿಸಿದ್ದ ಎಂದು ಹೇಳಿರುವುದಿಲ್ಲ.

2. ನನ್ನ ತಾಯಿ ಮೃತಪಟ್ಟ ನಂತರ ಪೊಲೀಸರು ವಿಚಾರಣೆ ಮಾಡಿದ್ದರು. ಆಗ ನಾನು ಆರೋಪಿಗಳು ನನ್ನ ತಾಯಿಯನ್ನು ಅತ್ಯಾಚಾರ ಮಾಡಲು ಪ್ರಯತ್ನಿಸಿ ಮಾರಣಾಂತಿಕವಾಗಿ ಹಲ್ಲೆ ನಡೆಸಿ ಕೊಲೆ

ಮಾಡಿದ್ದಾರೆ ಎಂದು ಹೇಳಿಕೆಗಳನ್ನು ನೀಡಿರುವುದಿಲ್ಲ. ಪೊಲೀಸರು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ದಸ್ತಗಿರಿ ಮಾಡಿ ಮೊಬೈಲ್ ನಲ್ಲಿ ನನಗೆ ಫೋಟೋ ತೋರಿಸಿ ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ಹೇಳಿರುತ್ತಾರೆ. ಆ ದಿನ ಪೊಲೀಸರು ಮೊಬೈಲ್ ನಲ್ಲಿ ತೋರಿಸಿದ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದೆ ಹಾಜರಿದ್ದಾರೆ. ಆರೋಪಿಗಳು ಯಾವ ರೀತಿ ನನ್ನ ತಾಯಿಯವರನ್ನು ಹಲ್ಲೆ ಮಾಡಿದ್ದಾರೆ ಎಂದು ನನಗೆ ಗೊತ್ತಾಗಿಲ್ಲ. ಈಗ ತೋರಿಸಿದ ಛಾಯಾಚಿತ್ರಗಳಲ್ಲಿ ನನ್ನ ತಾಯಿಯವರ ಮೃತ ದೇಹ ಕಾಣಿಸುತ್ತಿದೆ. ಸದರಿ ಛಾಯಾಚಿತ್ರಗಳನ್ನು ಕ್ರಮವಾಗಿ ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮಹಜರನಲ್ಲಿ ನನ್ನ ಹೆಬ್ಬೆಟ್ಟಿನ ಗುರುತು ಇದೆ. ಸದರಿ ಮಹಜರನ್ನು ನಿಪಿ 4 ಎಂದು ಗುರುತಿಸಲಾಯಿತು. ನಿಪಿ 4 ಮಹಜರು ಮಾಡುವ ಸಮಯದಲ್ಲಿ ಪೊಲೀಸರಿಗೆ ನನ್ನ ತಾಯಿ ಧರಿಸಿದ್ದ ನೈಟಿಯನ್ನು ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ನೀಡಿದ್ದೆ. ಸದರಿ ರಕ್ತದ ಕಲೆ ಇದ್ದ ನೈಟಿಯನ್ನು ಪೊಲೀಸರು ಜಪ್ತು ಮಾಡಿರುತ್ತಾರೆ. ಸದರಿ ನೈಟಿಯನ್ನು ಈಗ ನೋಡುತ್ತಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

3. ದಿಃ 03.03.2022 ರಂದು ನಾನು ಹಾಗೂ ನನ್ನ ಗಂಡ ಊಟ ಮಾಡಲು ಲೈನ್ ಮನೆಗೆ ಬಂದಿದ್ದು ಆಗ ಚಾಸಾ 5 ರವರು ಫೋನ್ ಮಾಡಿ ನಿನ್ನ ತಾಯಿ ಚಿಮ್ಮಿ ಬಿದ್ದು ಹೋಗಿದ್ದು ಆಕೆಯ ಕುತ್ತಿಗೆಗೆ ಕಡಿದಂತಹ ಇರುವ ಗಾಯವಾಗಿರುತ್ತದೆ ಎಂದು ಫೋನ್ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿ. ಆಗ ನಾನು ಹಾಗೂ ಚಾಸಾ 4 ರವರು ನನ್ನ ತಾಯಿ ವಾಸವಾಗಿದ್ದ ಪೂಣಚ್ಚ ರವರ ತೋಟದ ಲೈನ್ ಮನೆಗೆ ಬಂದಿದ್ದೆವು ಎಂದರೆ ಸರಿ. ನಾವು ನೋಡಿದಾಗ ನನ್ನ ತಾಯಿ ಲೈನ್ ಮನೆಯ ಹಿಂದೆ ನೆಲದಲ್ಲಿ ಬಿದ್ದಿದ್ದರು ಎಂದರೆ ಸರಿ. ಆಕೆಯ ಕುತ್ತಿಗೆಯ ಬಳಿ ಕಡಿದ ಗಾಯ ಆಗಿದ್ದು, ಆಕೆ ನಿತ್ರಾಣ ಸ್ಥಿತಿಯಲ್ಲಿ ಇದ್ದರು ಎಂದರೆ ಸರಿ. ನಾನು ನನ್ನ ತಾಯಿಯನ್ನು ವಿಚಾರಿಸಿದಾಗ ಅವರು ನಿನ್ನೆ ದಿಃ 02.03.2022 ರಂದು ಪಕ್ಕದ ತೋಟದ ಲೈನ್ ಮನೆಯಲ್ಲಿ ವಾಸವಾಗಿರುವ 1 ನೇ ಆರೋಪಿ ಮಂಜು ಮನೆಗೆ ಬಂದಿದ್ದು, ನಾನು ಗಂಡ ಮನೆಯಲ್ಲಿ ಇಲ್ಲ ಇಲ್ಲಿಂದ ಹೋಗು ಎಂದು ಹೇಳಿದ್ದು ನನಗೆ ಬೈದು ಜಗಳ ಮಾಡಿ ಕೈಯಿಂದ ಹೊಡೆಯಲು ಬಂದಿದ್ದು ನಾನು ಆತನನ್ನು ದೂಡಿದೆ, ಆಗ ಆತ ನಿನಗೆ ಕಲಿಸುತ್ತೇನೆ ಎಂದು ಹೇಳಿ ಪಕ್ಕದ ಲೈನ್ ಮನೆಗೆ ಹೋಗಿ ವಾಪಸ್ಸು ಬಂದು ನನ್ನನ್ನು ದೂಡುತ್ತೀಯಾ, ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಹೇಳಿ ಏಕಾಏಕಿಯಾಗಿ ಆತನ ಕೈಯಲ್ಲಿ ಇದ್ದ ಕತ್ತಿಯಿಂದ ನನ್ನನ್ನು ಕೊಲ್ಲುವ ಉದ್ದೇಶದಿಂದ ಕುತ್ತಿಗೆಗೆ ಕಡಿದನು, ನಾನು ನಿತ್ರಾಣಗೊಂಡು ಅಲ್ಲಿಯೇ ಬಿದ್ದು ಹೋದೆ ಹಾಗೂ ಆತ ಕತ್ತಿಯ ಸಮೇತ ಅಲ್ಲಿಂದ ಹೊರಟು ಹೋದನು ಎಂದು ಹೇಳಿರುತ್ತಾರೆ ಎಂದರೆ

ಸರಿ. ನಂತರ ನಾನು, ಚಾಸಾ 3 ಮತ್ತು ಚಾಸಾ 4 ರವರು ನನ್ನ ತಾಯಿಯನ್ನು ವಿರಾಜಪೇಟೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿ. ಅಲ್ಲಿಗೆ ಪೊಲೀಸರು ಬಂದು ವಿಚಾರಿಸಿದಾಗ ನಾನು ಆರೋಪಿ ಮಂಜು ನನ್ನ ತಾಯಿಗೆ ಕತ್ತಿಯಿಂದ ಕಡಿದು ಕೊಲ್ಲಲು ಪ್ರಯತ್ನಿಸಿದ್ದ ಹಾಗೂ ಆತನ ವಿರುದ್ಧ ಕ್ರಮ ಜರುಗಿಸಬೇಕು ಎಂದು ಹೇಳಿಕೆ ದೂರು ನೀಡಿದ್ದೆ ಎಂದರೆ ಸರಿ.

4. ದಿಃ 04.03.2023 ರಂದು ನಾನು ಮು ಮಾ 1 ನೈಟಿಯನ್ನು ಚಾಸಾ 12 ರವರ ಹಾಜರಾತಿಯಲ್ಲಿ ಪೊಲೀಸರಿಗೆ ನೀಡಿದ್ದು ಪೊಲೀಸರು ಸದರಿ ನೈಟಿಯನ್ನು ಜಪ್ತು ಮಾಡಿ ನಿಪಿ 4 ರಂತೆ ಮಹಜರನ್ನು ಮಃ 2.30 ರಿಂದ 3.30 ಗಂಟೆಯವರೆಗೆ ಬರವಣಿಗೆ ಮಾಡಿ ನನ್ನ ಹೆಬ್ಬೆಟ್ಟಿನ ಗುರುತು ಹಾಗೂ ಚಾಸಾ 12 ರವರ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

5. ನಾವು ತಾಯಿಯನ್ನು ಕೆ ಆರ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಿದ್ದ ಸಮಯದಲ್ಲಿ ನಾನು ನನ್ನ ತಾಯಿಯನ್ನು ಮತ್ತೊಮ್ಮೆ ಕೇಳಿದಾಗ ಅವರು ಎರಡು ಜನರು ಕುತ್ತಿಗೆಗೆ ಕಡಿದು ಗಾಯಗೊಳಿಸಿದ್ದರು ಎಂದು ಕೈ ಸನ್ನೆ ಮಾಡಿ ತೋರಿಸಿರುತ್ತಾರೆ ಎಂದರೆ ಸರಿ. ನಾನು ಆಗ ಪೊಲೀಸರ ಸಮಕ್ಷಮ 1 ನೇ ಆರೋಪಿ ಸುರೇಶ ಅಲಿಯಾಸ್ ಮಂಜು ರವರ ಮೇಲೆ ನನಗೆ ಸಂಶಯವಿದೆ ಎಂದು ಹೇಳಿಕೆ ನೀಡಿದ್ದೆ ಎಂದರೆ

ಸರಿ. ನನ್ನ ತಾಯಿ ದಿಃ 07.03.2022 ರಂದು ರಾತ್ರಿ ಮೃತಪಟ್ಟರು ಎಂದರೆ ಸರಿ. ದಿಃ 08.03.2022 ರಂದು ಮರಣೋತ್ತರ ಪರೀಕ್ಷೆ ಆದ ನಂತರ ತಾಯಿಯ ಶರೀರವನ್ನು ದಫನ್ ಮಾಡಿರುತ್ತೇವೆ ಎಂದರೆ ಸರಿ.

6. ದಿಃ 09.03.2022 ರಂದು ರಾತ್ರಿ ಪೊಲೀಸರು ನ್ಯಾಯಾಲಯದ ಮುಂದಿರುವ ಇಬ್ಬರು ಆರೋಪಿಗಳನ್ನು ಬಂಧಿಸಿ ಅವರನ್ನು ವಿಚಾರಣೆ ಮಾಡಿದಾಗ ಅವರಿಬ್ಬರು ಸೇರಿಕೊಂಡು ನಮ್ಮ ತಾಯಿಯನ್ನು ಅತ್ಯಾಚಾರ ಮಾಡುವ ಉದ್ದೇಶದಿಂದ ದಿಃ 02.03.2022 ರಂದು ರಾತ್ರಿ ಸುಮಾರು 11 ಗಂಟೆಯ ಸಮಯಕ್ಕೆ ನನ್ನ ತಾಯಿ ವಾಸವಾಗಿದ್ದ ಲೈನ್ ಮನೆಗೆ ಬಂದಿದ್ದು ಮಲಗಿದ್ದ ನನ್ನ ತಾಯಿಯ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದಾಗ ಆಕೆ ವಿರೋಧ ಮಾಡಿದ್ದರಿಂದ ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ 1 ನೇ ಆರೋಪಿಯು ಕತ್ತಿಯಿಂದ ಆಕೆಯ ಗಂಟಲಿಗೆ ಕಡಿದು ಗಾಯಗೊಳಿಸಿದ್ದಾರೆ ಎಂದು ಹೇಳಿರುತ್ತಾರೆ ಎಂದು ಪೊಲೀಸರಿಂದ ನನಗೆ ವಿಚಾರ ಗೊತ್ತಾಯಿತು ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರ ಸಮಕ್ಷಮ ಮುಂದುವರಿದ ಹೇಳಿಕೆ ನೀಡಿದ್ದೆ ಎಂದರೆ ಸರಿ.

(ಈ ಹಂತದಲ್ಲಿ ಸಾಕ್ಷಿಯು ತನಗೆ ಊರಿಗೆ ಮರಳಲು ಮದ್ಯಾಹ್ನದ ನಂತರ ಬಸ್ಸಿನ ಸೌಕರ್ಯ ಇಲ್ಲ ಎಂದು ಹೇಳಿದ್ದು ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)